# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್ ಸಿ /ಎಸ್ ಟಿ ನಂ : 16/2023**

ಪ್ರ.ವ.ಬೋ. ದಿನಾಂಕ – 17.07.2025

| | | | | |
|---|---|---|---|---|
| ಸಾಕ್ಷಿದಾರರ ಹೆಸರು | – ಚಂದ್ರಾನಾಯ್ಕ | | ಫ್ರಾಸಾ | 04 |
| ತಂದೆಯ ಹೆಸರು | – ಸೋಮ್ಲಾನಾಯ್ಕ | | ಚಾಸಾ | 04 |
| ವಯಸ್ಸು | – 40 ವರ್ಷ | | | |
| ಉದ್ಯೋಗ | – ವ್ಯವಸಾಯ | | | |
| ವಾಸ ಸ್ಥಳ | – ವಲಸೆ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ:5 ಎಂದು, ಸಾಕ್ಷಿಯ ಸಹಿಯನ್ನು ನಿಪಿ:5(ಎ) ಎಂದು ಗುರುತಿಸಲಾಯಿತು. ದಿ. 2.3.2023 ರಂದು ಚಳ್ಳಕೆರೆ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲಿಸರು ಠಾಣೆಯಲ್ಲಿ ಮಹಜರ ಮಾಡಿ, ದೊಣ್ಣೆಯನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ದೊಣ್ಣೆಯನ್ನು ಈಗಾಗಲೇ ಎಂಓ:1 ಎಂದು ಗುರುತಿಸಲಾಗಿದೆ. ಸಾಕ್ಷಿಯು ಎಂಓ:1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಗಲಾಟೆಯ ವಿಚಾರವನ್ನು ಕೇಳಿ ತಿಳಿದುಕೊಂಡ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**(ಪಾಟೀ ಸವಾಲು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ 500/- ರ ಖರ್ಚಿನೊಂದಿಗೆ ಮುಂದೂಡಲಾಗಿದೆ.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

**ಸಾಕ್ಷಿಯನ್ನು ದಿನಾಂಕ : 10.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**– ಪಾಟೀ ಸವಾಲು – ಆರೋಪಿಯ ಪರ ಕೆ.ಎನ್.ಎಂ. ವಕೀಲರಿಂದ –**

ನಿಪಿ:5 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ:5 ನ್ನು ಡಿವೈಎಸ್‌ಪಿ ಕಚೇರಿಯಲ್ಲಿ ಬರೆದಿರುತ್ತಾರೆ. ಯಾವ ಉದ್ದೇಶಕ್ಕೆ ನಿಪಿ:5 ನ್ನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಎಂಓ:1 ನ್ನು ಪೋಲಿಸರು ತಂದಿದ್ದರು. ಪೋಲಿಸರು ಠಾಣೆಯಲ್ಲಿ ಕಟ್ಟಿಗೆಯನ್ನು ನನಗೆ ತೋರಿಸಿರುತ್ತಾರೆ ಎಂದರೆ ಸರಿ. ಪೋಲಿಸರು ನಿಪಿ:5 ರಂತೆ ಮಹಜರ ಮಾಡಿ ಎಂಓ:1 ನ್ನು ವಶಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ:1 ಮತ್ತು ನಾನು ಒಂದೇ ಊರಿನವರು ಎಂದರೆ ಸರಿ. ಚಾಸಾ:1 ನನಗೆ ದೂರದ ಸಂಬಂಧಿಕನಾಗಬೇಕು. ಚಾಸಾ:1 ನನ್ನ ಸಂಬಂಧಿಕನಾದ್ದರಿಂದ ಆತನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.